# ಶ್ರೀನಿಕೇತನ ವಿದ್ಯಾರ್ಥಿಗಳು ವಿಡಿಐಟಿಗೆ ಭೇಟಿ




**ಕೊಂಕಣವಾಹಿನಿ ನ್ಯೂಸ್,**
**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳಕ್ಕೆ ಶಿರಸಿ ಶ್ರೀನಿಕೇತನ ಪ್ರೌಢಶಾಲೆಯ 65 ವಿದ್ಯಾರ್ಥಿಗಳು ಶನಿವಾರ ಭೇಟಿ ನೀಡಿದ್ದರು.

ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಬಳಸುತ್ತಿರುವ ನೂತನ ತಂತ್ರಜ್ಞಾನಗಳ ಕುರಿತಾಗಿ ವಿದ್ಯಾರ್ಥಿಗಳು ಈ ಭೇಟಿಯಲ್ಲಿ ತಿಳಿದುಕೊಂಡರು. ಮಹಾವಿದ್ಯಾಲಯದ ತಾಂತ್ರಿಕ ವಸ್ತು ಸಂಗ್ರಹಾಲಯ 'ಜಾಗೃತಿ' ಗೆ ಭೇಟಿ ನೀಡಿ ವೋಲ್ವೋ ಬಸ್ಸಿನ ಮಾದರಿ, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಸಿವಿಲ್ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಬಳಸಲಾಗುತ್ತಿರುವ ಉಪಕರಣಗಳ ಮಾದರಿಯನ್ನು ವೀಕ್ಷಿಸಿದರು. ಟಯೋಟಾ ಕಿರ್ಲೋಸ್ಕರ್ ನ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡಿ ಟಯೋಟಾ ವಾಹನದ ಮಾದರಿಯನ್ನು ವೀಕ್ಷಿಸಿದರು.

ಮಹಾವಿದ್ಯಾಲಯದ ಮೇಲ್ಛಾವಣಿಯಲ್ಲಿರುವ ಸೌರ ವಿದ್ಯುತ್ ಆಗರವನ್ನು ವೀಕ್ಷಿಸಿ ಬೆಳಕಿನಿಂದ ವಿದ್ಯುತ್ ಶಕ್ತಿಯನ್ನು ಪರಿವರ್ತಿಸುವ ಕ್ರಮವನ್ನು ತಿಳಿದುಕೊಂಡರು. ಕೃತಕ ಬುದ್ಧಿಮತ್ತೆ ಹಾಗೂ ಯಂತ್ರ ಕಲಿಕೆಯನ್ನು ಶೈಕ್ಷಣಿಕ ಪ್ರಗತಿಗೆ ಹೇಗೆ ಬಳಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿದುಕೊಂಡರು. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೂತನ ತಂತ್ರಜ್ಞಾನಗಳ ಕುರಿತಾಗಿ ಅರಿವು ಮೂಡಿಸಲು ಈ ಬೇಟಿಯನ್ನು ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ಹೇಳಿದರು.

ಶ್ರೀನಿಕೇತನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ವಸಂತ ಭಟ್ ಆಧುನಿಕ ತಂತ್ರಜ್ಞಾನದ ಕುರಿತಾಗಿ ತಿಳುವಳಿಕೆ ನೀಡಿದ ಮಹಾವಿದ್ಯಾಲಯಕ್ಕೆ ಅಭಾರಿಯಾಗಿದ್ದೇವೆ ಎಂದು ಹೇಳಿದರು. ಪ್ರೊ. ರಜತ್ ಆಚಾರ್ಯ ಮತ್ತು ಪ್ರೊ. ವಿಜೇತ್ ಸ್ವಾದಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

# ಶ್ರೀನಿಕೇತನ ವಿದ್ಯಾರ್ಥಿಗಳು ವಿಡಿಐಟಿಗೆ ಭೇಟಿ



ಹಳಿಯಾಳ: ಕೆಎಲ್‌ಎಸ್‌ವಿಡಿಐಟಿ ಹಳಿಯಾಳಕ್ಕೆ ಶಿರಸಿ ಶ್ರೀನಿಕೇತನ ಪ್ರೌಢಶಾಲೆಯ 65 ವಿದ್ಯಾರ್ಥಿಗಳು ನವಂಬರ್ 15 ರಂದು ಭೇಟಿ ನೀಡಿದ್ದರು. ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಬಳಸುತ್ತಿರುವ ನೂತನ ತಂತ್ರಜ್ಞಾನಗಳ ಕುರಿತಾಗಿ ವಿದ್ಯಾರ್ಥಿಗಳು ಈ ಭೇಟಿಯಲ್ಲಿ ತಿಳಿದುಕೊಂಡರು.

ಮಹಾವಿದ್ಯಾಲಯದ ತಾಂತ್ರಿಕ ವಸ್ತು ಸಂಗ್ರಹಾಲಯ 'ಜಾಗೃತಿ ' ಗೆ ಭೇಟಿ ನೀಡಿ ವೋಲ್ವೋ ಬಸ್ಸಿನ ಮಾದರಿ, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಸಿವಿಲ್ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಬಳಸಲಾಗುತ್ತಿರುವ ಉಪಕರಣಗಳ ಮಾದರಿಯನ್ನು ವೀಕ್ಷಿಸಿದರು. ಟಯೋಟಾ ಕಿರ್ಲೋಸ್ಕರ್ ನ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡಿ ಟಯೋಟಾ ವಾಹನದ ಮಾದರಿಯನ್ನು ವೀಕ್ಷಿಸಿದರು. ಮಹಾವಿದ್ಯಾಲಯದ ಮೇಲ್ಛಾವಣಿಯಲ್ಲಿರುವ ಸೌರ ವಿದ್ಯುತ್ ಆಗರವನ್ನು ವೀಕ್ಷಿಸಿ ಬೆಳಕಿನಿಂದ ವಿದ್ಯುತ್ ಶಕ್ತಿಯನ್ನು ಪರಿವರ್ತಿಸುವ ಕ್ರಮವನ್ನು ತಿಳಿದುಕೊಂಡರು. ಕೃತಕ ಬುದ್ಧಿಮತ್ತೆ ಹಾಗೂ ಯಂತ್ರ ಕಲಿಕೆಯನ್ನು ಶೈಕ್ಷಣಿಕ ಪ್ರಗತಿಗೆ ಹೇಗೆ ಬಳಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿದುಕೊಂಡರು.

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನೂತನ ತಂತ್ರಜ್ಞಾನಗಳ ಕುರಿತಾಗಿ ಅರಿವು ಮೂಡಿಸಲು ಈ ಬೇಟಿಯನ್ನು ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಹೇಳಿದರು. ಶ್ರೀನಿಕೇತನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ವಸಂತ ಭಟ್ ಆಧುನಿಕ ತಂತ್ರಜ್ಞಾನದ ಕುರಿತಾಗಿ ತಿಳುವಳಿಕೆ ನೀಡಿದ ಮಹಾವಿದ್ಯಾಲಯಕ್ಕೆ ಅಭಾರಿಯಾಗಿದ್ದೇವೆ ಎಂದು ಹೇಳಿದರು. ಪ್ರೊ. ರಜತ್ ಆಚಾರ್ಯ ಮತ್ತು ಪ್ರೊ. ವಿಜೇತ್ ಸ್ವಾದಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.


Powered By KHUSHIHOST ® | License - ePaperCloud.com